ಕ್ರಿ ಮಿಸ್ ಕೇಸ್ -213 /2024
ಪಿ.ಡಬ್ಲ್ಯು. - 01

**ದಿನಾಂಕ 22-04 -2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ಎದುರುದಾರರ ಪರ ವಕೀಲರಿಂದಃ**

ನನ್ನ ಅರ್ಜಿಯಲ್ಲಿ ತಿಳಿಸಿದಂತೆ ಹೊನ್ನಾಳಶಯದಲ್ಲಿ ನಾನು ನನ್ನ ಗಂಡನ ಜೊತೆ ವಾಸ ಮಾಡಲು ಅನುವು ಮಾಡಿಕೊಡಬೇಕು ಎಂದು ಕೇಳಿದ್ದು ಬಿಟ್ಟರೇ ಬೇರೆ ಯಾವುದೇ ಕ್ಲೇಮ್ ಮಾಡಿಲ್ಲ . ನನ್ನ ಗಂಡ ಉಡುಪಿಯ ಕೌಟುಂಬಿಕ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ . ಸದ್ರಿ ಅರ್ಜಿ ತಿರಸ್ಕತಗೊಂಡಿರುತ್ತದೆ ಎಂದರೆ ಸರಿ . ಸದ್ರಿ ಆದೇಶದ ವಿರುದ್ದ ನನ್ನ ಗಂಡ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈಗ ಕೊಡವೂರು ಶಾಲೆಯಲ್ಲಿ ಕೆಲಸ ಮಾಡಿಕೊಂಡಿರುತ್ತೇನೆ. ನಾನು ನನ್ನ ತಾಯಿ ಊರು ಉದ್ಯಾವರದಲ್ಲಿ ವಾಸವಾಗಿರುತ್ತೇನೆ . ನಾನು ಕಳೆದ 1 ವರ್ಷಗಳಿಂದ ನಮ್ಮ ತಾಯಿ ಊರಾದ ಉದ್ಯಾವರದಿಂದ ಕೊಡವೂರು ಶಾಲೆಗೆ ಓಡಾಡುತಿದ್ದೇನೆ . ಕಲ್ಮಾಡಿಯಲ್ಲಿ ನನ್ನ ಅಜ್ಜಿ ಮನೆ ಇರುತ್ತದೆ. ಕುದ್ಪಾಡಿಯ ವೆಲಂಕಣಿಯಲ್ಲಿ ನಾನು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆ. ಆ ಸಮಯದಲ್ಲಿ ನನ್ನ ಮಗಳು ಮತ್ತು ನಾನು ಮಾತ್ರ ಇದ್ದೆವು . ಕಲ್ಮಾಡಿಯಿಂದ ಕೊಡವೂರು ಶಾಲೆಗೆ 2 ಕಿಲೋ ಮಿ ಅಂತರ ಇತ್ತು . ಕುದ್ಪಾಡಿಯ ವೆಲಂಕಣಿ ಮನೆಯಲ್ಲಿ ಈಗ ನಾನು ವಾಸವಾಗಿಲ್ಲ. ಕಲ್ಮಾಡಿಯ ನನ್ನ ಅಜ್ಜಿ ಮನೆಯಲ್ಲಿ ನಾನು ವಾಸ್ತವ್ಯ ಇರಲು ನಮ್ಮ ಅಜ್ಜಿಯ ಮನೆಯ ಕುಟುಂಬದವರಿಂದ ಆಕ್ಷೇಪಣೆ ಇರುತ್ತದೆ . ಸಾಕ್ಷಿ ಮುಂದುವರಿದು ನನ್ನ ತಂದೆ ಅಜ್ಜಿ ಮನೆಯಲ್ಲಿ ಇರುವುದು ಬೇಡ ಬಾ ಎಂದು ಕೂಗಿದರು . ನನ್ನ ತಂದೆ ಮನೆ ಉದ್ಯಾವರದಲ್ಲಿ ಇರುತ್ತದೆ.

ಕಡೆಯ ಬಾರಿಗೆ ನನ್ನ ಗಂಡ ನಾನು ಕುದ್ಪಾಡಿಯ ವೆಲಂಕಣಿಯಲ್ಲಿರುವಾಗ ನನ್ನನ್ನು ಬಿಟ್ಟು ಹೋಗಿರುತ್ತಾರೆ. ಅವರು ಡಿಸೆಂಬರ್ ತಿಂಗಳು 2021 ರಲ್ಲಿ ಬಿಟ್ಟು ಹೋಗಿರುತ್ತಾರೆ . ನನ್ನ ಗಂಡನ ಮನೆಯನ್ನು ಆತನೇ ಕಟ್ಟಿಸಿರುತ್ತಾರೆ ಎಂದರೆ ಸರಿ . ಸದ್ರಿ ಮನೆ ಇರುವ ಜಾಗ ಆತನ ತಂದೆಗೆ ಸೇರಿರುತ್ತದೆ . ಸದ್ರಿ ಜಾಗ ಇನ್ನೂ ವಿಭಾಗವಾಗಿಲ್ಲ ಎಂದರೆ ಸರಿಯಲ್ಲ . ನನ್ನ ಗಂಡನ ತಂದೆಗೆ ಇಬ್ಬರು ಹೆಂಡತಿಯರು ಮೊದಲನೇ ಹೆಂಡತಿಯಿಂದ 2 ಗಂಡು ಮಕ್ಕಳು ನನ್ನ ಮಾವನ 2 ನೇ ಹೆಂಡತಿಗೆ ನನ್ನ ಗಂಡ ಮತ್ತು ಮತ್ತೊಬ್ಬಳು ನನ್ನ ನಾದಿನಿ ಇರುತ್ತಾರೆ . ನನ್ನ ಗಂಡನ ಮನೆಯಿಂದ ಜೀವನ್ ಕುಮಾರ್ ಮನೆ 2 ಕಿಲೋ ಮೀ ಅಂತರ ಇರುತ್ತದೆ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

ಕ್ರಿ ಮಿಸ್ ಕೇಸ್ -213 /2024
ಪಿ.ಡಬ್ಲ್ಯು. - 01

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.